Akashvani : Bengaluru
National Bulletin In Kannada
26.10.2025 : 1310hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ೧೨೭ನೇ ಮನ್ ಕಿ ಬಾತ್ ಕಾರ್ಯಕ್ರಮ: 'ವಂದೇ ಮಾತರಂ' ೧೫೦ನೇ ವರ್ಷಾಚರಣೆಗೆ ಪ್ರಧಾನಿ ನರೇಂದ್ರ ಮೋದಿ ಕರೆ

೨. ಭಾರತೀಯ ಕಾಫಿಯ ವಿಶ್ವ ಪ್ರಖ್ಯಾತಿಯ ಬಗ್ಗೆ ಮನದ ಮಾತಿನಲ್ಲಿ ಪ್ರಧಾನಿ ಪ್ರಸ್ತಾಪ; ಕರ್ನಾಟಕದ ಮೂರು ಜಿಲ್ಲೆಗಳ ಉಲ್ಲೇಖ

೩. ಕೌಲಾಲಂಪುರದಲ್ಲಿಂದು ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ - ಆಸಿಯಾನ್ ವಾರ್ಷಿಕ ಶೃಂಗಸಭೆ ಆರಂಭ

೪. ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ; ಇನ್ನೆರಡು ದಿನಗಳಲ್ಲಿ ಆಂಧ್ರಪ್ರದೇಶ ಕರಾವಳಿಗೆ ಅಪ್ಪಳಿಸಲಿರುವ ಮೊಂತಾ ಚಂಡಮಾರುತ; ಮಧ್ಯ-ದಕ್ಷಿಣ ಭಾರತದಲ್ಲಿ ಭಾರಿ ಮಳೆಯ ಮುನ್ಸೂಚನೆ

***************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದ ೧೨೭ ನೇ ಸಂಚಿಕೆಯ ಮೂಲಕ ಸಮಸ್ತ ಭಾರತೀಯರನ್ನುದ್ದೇಶಿಸಿ ಮಾತನಾಡಿದರು. ದೀಪಾವಳಿಯ ನಂತರ ದೇಶದಲ್ಲಿ ಮನೆಮಾಡಿರುವ ಛಠ್ ಪೂಜೆಯ ಸಂಭ್ರಮಕ್ಕೆ ಶುಭ ಹಾರೈಸಿದ ಅವರು, ಸ್ವಚ್ಛತಾ ಅಭಿಯಾನಗಳು, ಪರಿಸರ ಸಂರಕ್ಷಣೆ, ಭಾರತೀಯ ಶ್ವಾನ ತಳಿಗಳ ಮಹತ್ವ, 'ವಂದೇ ಮಾತರಂ' ಗೀತೆಯ ೧೫೦ ನೇ ವರ್ಷಾಚರಣೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸೇರಿದಂತೆ ಹಲವು ವಿಷಯಗಳ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಮೊದಲಿಗೆ ದೇಶವಾಸಿಗಳಿಗೆ ಛಠ್ ಹಬ್ಬದ ಶುಭಾಶಯ ಕೋರಿದ ಪ್ರಧಾನಿ, ಈ ಹಬ್ಬವು ಸಂಸ್ಕೃತಿ, ಪ್ರಕೃತಿ ಮತ್ತು ಸಮಾಜದ ನಡುವಿನ ಏಕತೆಯ ಪ್ರತಿಬಿಂಬವಾಗಿದೆ ಎಂದು ಬಣ್ಣಿಸಿದರು. ವಿಶೇಷವಾಗಿ ಬಿಹಾರ, ಜಾರ್ಖಂಡ್ ಮತ್ತು ಪೂರ್ವಾಂಚಲದ ಜನತೆಗೆ ಶುಭ ಹಾರೈಸಿದ ಅವರು, ಹಬ್ಬಗಳ ಕುರಿತು ತಾವು ಬರೆದ ಪತ್ರಕ್ಕೆ ಬಂದ ಸಕಾರಾತ್ಮಕ ಪ್ರತಿಕ್ರಿಯೆಗಳ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಮಾವೋವಾದಿ ಭಯೋತ್ಪಾದನೆಯ ಕಗ್ಗತ್ತಲಲ್ಲಿದ್ದ ಪ್ರದೇಶಗಳಲ್ಲಿಯೂ ಈ ಬಾರಿ ದೀಪಾವಳಿಯ ದೀಪಗಳು ಬೆಳಗಿವೆ ಎಂದ ಅವರು, ಮಾವೋವಾದವನ್ನು ಬುಡಸಮೇತ ನಿರ್ಮೂಲನೆ ಮಾಡುವ ಜನರ ಬಯಕೆಯನ್ನು ಪುನರುಚ್ಚರಿಸಿದರು. ಆಪರೇಷನ್ ಸಿಂದೂರ್ ಪ್ರತಿಯೊಬ್ಬ ಭಾರತೀಯನನ್ನು ಹೆಮ್ಮೆಯಿಂದ ಬೀಗುವಂತೆ ಮಾಡಿದೆ ಎಂದರು. ರಾಷ್ಟ್ರದ ಜನಮಾನಸದಲ್ಲಿರುವ ಗೀತೆ 'ವಂದೇ ಮಾತರಂ' ಕುರಿತು ಮಾತನಾಡಿದ ಪ್ರಧಾನಿ, ನವೆಂಬರ್ ೭ ರಂದು ಈ ಗೀತೆಯ ರಚನೆಯ ೧೫೦ ನೇ ವರ್ಷಾಚರಣೆ ಆರಂಭವಾಗಲಿದೆ ಎಂದು ಘೋಷಿಸಿದರು. ಬಂಕಿಮ ಚಂದ್ರ ಚಟ್ಟೋಪಾಧ್ಯಾಯರಿಂದ ರಚಿಸಲ್ಪಟ್ಟ ಮತ್ತು ೧೮೯೬ ರಲ್ಲಿ ಗುರುದೇವ ರವೀಂದ್ರನಾಥ್ ಟಾಗೋರ್ ಅವರಿಂದ ಮೊದಲ ಬಾರಿಗೆ ಹಾಡಲ್ಪಟ್ಟ ಈ ಗೀತೆಯು ರಾಷ್ಟ್ರಪ್ರೇಮದ ಅಗಾಧ ಭಾವನೆಯನ್ನು ಹೊತ್ತಿದೆ ಎಂದರು. 'ವಂದೇ ಮಾತರಂ' ಅನ್ನು ೧೯ನೇ ಶತಮಾನದಲ್ಲಿ ಬರೆಯಲಾಗಿದ್ದರೂ, ಅದರ ಚೈತನ್ಯ ಸಾವಿರಾರು ವರ್ಷಗಳಷ್ಟು ಹಳೆಯದಾದ ಭಾರತದ ಅಮರ ಪ್ರಜ್ಞೆಯೊಂದಿಗೆ ಜೋಡಣೆಯಾಗಿತ್ತು ಎಂದ ಅವರು, ಈ ಐತಿಹಾಸಿಕ ಸಂದರ್ಭವನ್ನು ಸ್ಮರಣೀಯವಾಗಿಸಲು ದೇಶವಾಸಿಗಳು ತಮ್ಮ ಸಲಹೆಗಳನ್ನು #VandeMatram150 ಬಳಸಿ ಹಂಚಿಕೊಳ್ಳಬೇಕೆಂದು ಕರೆ ನೀಡಿದರು.

ಜಿಎಸ್‌ಟಿ ಉಳಿತಾಯ ಉತ್ಸವ, ವೋಕಲ್ ಫಾರ್ ಲೋಕಲ್ ಉಪಕ್ರಮದಡಿ ಸ್ಥಳೀಯ ಉತ್ಪನ್ನಗಳ ಹೆಚ್ಚಿದ ಖರೀದಿ ಮತ್ತು ಖಾದ್ಯ ತೈಲ ಬಳಕೆಯಲ್ಲಿ ಶೇಕಡ ೧೦ ರಷ್ಟು ಕಡಿತ ಮಾಡುವ ಸಂಕಲ್ಪಕ್ಕೆ ಜನರ ಬೆಂಬಲ ದೊರೆತಿರುವುದನ್ನು ಪ್ರಧಾನಿ ಉಲ್ಲೇಖಿಸಿದರು. ಸ್ವಚ್ಛತೆಯ ಕುರಿತು ಮಾತನಾಡಿದ ಪ್ರಧಾನಿ, ಛತ್ತೀಸ್‌ಗಢದ ಅಂಬಿಕಾಪುರದಲ್ಲಿ ಆರಂಭಿಸಲಾಗಿರುವ 'ಗಾರ್ಬೇಜ್ ಕೆಫೆ'ಯ ವಿಶಿಷ್ಟ ಪ್ರಯತ್ನವನ್ನು ಶ್ಲಾಘಿಸಿದರು. ಈ ಕೆಫೆಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ತರುವ ಬಡವರಿಗೆ ಉಚಿತವಾಗಿ ಊಟ ಮತ್ತು ಉಪಾಹಾರವನ್ನು ಒದಗಿಸಲಾಗುತ್ತಿದೆ. ಅದೇ ರೀತಿ, ಬೆಂಗಳೂರಿನ ಎಂಜಿನಿಯರ್ ಕಪಿಲ್

ಶರ್ಮಾ ಅವರು, ಸ್ಥಳೀಯರು ಮತ್ತು ಉದ್ದಿಮೆಗಳ ಸಹಕಾರದೊಂದಿಗೆ ೪೦ ಬಾವಿಗಳು ಮತ್ತು ಆರು ಕೆರೆಗಳನ್ನು ಪುನರುಜ್ಜೀವನಗೊಳಿಸಿರುವ ಕುರಿತು ಶ್ಲಾಘನೆ ವ್ಯಕ್ತಪಡಿಸಿದರು. ಪರಿಸರ ಸಂರಕ್ಷಣೆಯ ಮಹತ್ವವನ್ನು ಒತ್ತಿ ಹೇಳಿದ ಪ್ರಧಾನಿ, ಗುಜರಾತ್ ಅರಣ್ಯ ಇಲಾಖೆಯು ಅಹಮದಾಬಾದ್ ಬಳಿಯ ಧೋಲೇರಾದಲ್ಲಿ ಕೈಗೊಂಡ ಮ್ಯಾಂಗ್ರೋವ್ ನಾಟಿ ಅಭಿಯಾನದ ಯಶಸ್ಸನ್ನು ಹಂಚಿಕೊಂಡರು. ಇದೇ ವೇಳೆ ಅವರು, ತಾಯಿಯ ಹೆಸರಿನಲ್ಲಿ ಒಂದು ಗಿಡ ಅಭಿಯಾನವನ್ನು ಮುಂದುವರಿಸಲು ಕರೆ ನೀಡಿದರು. ಸುಮಾರು ಐದು ವರ್ಷಗಳ ಹಿಂದೆ ಭಾರತೀಯ ಶ್ವಾನ ತಳಿಗಳನ್ನು ದತ್ತು ಪಡೆಯಲು ತಾವು ನೀಡಿದ್ದ ಕರೆಯನ್ನು ಸ್ಮರಿಸಿದ ಪ್ರಧಾನಿ, ಈ ನಿಟ್ಟಿನಲ್ಲಿ ಬಿಎಸ್‌ಎಫ್ ಮತ್ತು ಸಿಆರ್‌ಪಿಎಫ್ ಶ್ಲಾಘನೀಯ ಪ್ರಯತ್ನ ಮಾಡಿವೆ ಎಂದರು. ಗ್ವಾಲಿಯರ್‌ನ ಟೆಕನ್‌ಪುರದಲ್ಲಿ ರಾಂಪುರ, ಮುಧೋಳ ತರಬೇತಿ ನೀಡಲಾಗುತ್ತಿದ್ದರೆ, ಮೊಂಗ್ರೆಲ್ಸ್, ಮುಧೋಳ, ಕೊಂಬೈ ಮತ್ತು ಪಾಂಡಿಕೋನದಂತಹ ಭಾರತೀಯ ಬೇಟೆ ನಾಯಿ ತಳಿಗಳಿಗೆ ಬೆಂಗಳೂರಿನ ಸಿಆರ್‌ಪಿಎಫ್‌ನ ಶ್ವಾನ ತಳಿ ಮತ್ತು ತರಬೇತಿ ಶಾಲೆಯಲ್ಲಿ ತರಬೇತಿ ನೀಡಲಾಗುತ್ತಿದೆ. ಕಳೆದ ವರ್ಷ ಲಕ್ನೋದಲ್ಲಿ ನಡೆದ ಪೊಲೀಸ್ ಡ್ಯೂಟಿ ಮೀಟ್‌ನಲ್ಲಿ ಬಿಎಸ್‌ಎಫ್‌ನ 'ರಿಯಾ' ಎಂಬ ಮುಧೋಳ ಬೇಟೆನಾಯಿ ಪ್ರಥಮ ಬಹುಮಾನ ಗೆದ್ದಿದ್ದನ್ನು ಅವರು ಉಲ್ಲೇಖಿಸಿದರು. ಈ ಶ್ವಾನಗಳ ಪರಾಕ್ರಮವನ್ನು ಇದೇ ೩೧ ರಂದು ನಡೆಯುವ ಏಕತಾ ದಿನದ ಮೆರವಣಿಗೆಯಲ್ಲಿ ವೀಕ್ಷಿಸಬಹುದು ಎಂದು ಅವರು ಹೇಳಿದರು. ಇದೇ ೩೧ ರಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ೧೫೦ ನೇ ಜನ್ಮದಿನಾಚರಣೆಯ ವಿಶೇಷ ಸಂದರ್ಭವನ್ನು ಪ್ರಸ್ತಾಪಿಸಿದ ಪ್ರಧಾನಿ, ದೇಶದ ಏಕತೆಗಾಗಿ ಪಟೇಲರ ಕೊಡುಗೆಯನ್ನು ಸ್ಮರಿಸಿದರು. ಅವರ ಜಯಂತಿ ನಿಮಿತ್ತ ದೇಶಾದ್ಯಂತ ನಡೆಯುವ 'ಏಕತಾ ಓಟ'ದಲ್ಲಿ ಭಾಗವಹಿಸುವಂತೆ ದೇಶವಾಸಿಗಳಿಗೆ ಕರೆ ನೀಡಿದರು. ಒಡಿಶಾದ ಕೊರಾಪುಟ್ ಕಾಫಿಯ ರುಚಿ ಮತ್ತು ಅದು ಸ್ಥಳೀಯ ಬುಡಕಟ್ಟು ಮಹಿಳೆಯರು ಹಾಗೂ ಯುವ ವೃತ್ತಿಪರರ ಜೀವನದಲ್ಲಿ ತಂದಿರುವ ಸಕಾರಾತ್ಮಕ ಬದಲಾವಣೆಯ ಬಗ್ಗೆ ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತದ ಕಾಫಿ ಇಂದು ವಿಶ್ವಾದ್ಯಂತ ಪ್ರಸಿದ್ಧವಾಗುತ್ತಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು. ಇದೇ ವೇಳೆ ಅವರು, ಕರ್ನಾಟಕದ ಚಿಕ್ಕಮಗಳೂರು, ಕೊಡಗು ಮತ್ತು ಹಾಸನ, ತಮಿಳುನಾಡಿನ ಪುಲನಿ, ಸಿವರಾಯ್, ನೀಲಗಿರಿ ಮತ್ತು ಅಣ್ಣಾಮಲೈ ಪ್ರದೇಶಗಳು, ಕರ್ನಾಟಕ-ತಮಿಳುನಾಡು ಗಡಿಭಾಗದಲ್ಲಿನ ಬಿಳಿಗಿರಿ ಪ್ರದೇಶ, ಕೇರಳದ ವೈನಾಡು, ತಿರುವಾಂಕೂರ್ ಮತ್ತು ಮಲಬಾರ್ ಪ್ರದೇಶಗಳನ್ನು ಪ್ರಸ್ತಾಪಿಸಿ, ಭಾರತದ ಕಾಫಿಯ ವೈವಿಧ್ಯತೆ ನೋಡಲು ಬಹಳ ಅದ್ಭುತವೆನಿಸುತ್ತದೆ ಎಂದರು.

***************

ಕೌಲಾಲಂಪುರದಲ್ಲಿ ಇಂದು ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ - ಆಸಿಯಾನ್ ವಾರ್ಷಿಕ ಶೃಂಗಸಭೆ ಆರಂಭವಾಗಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ಜಾಗತಿಕ ನಾಯಕರು ಭಾಗವಹಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಆಸಿಯಾನ್-ಭಾರತ ಶೃಂಗಸಭೆಯಲ್ಲಿ ವರ್ಚುವಲ್ ಮೂಲಕ ಭಾಗವಹಿಸಲಿದ್ದಾರೆ. ಎರಡು ದಿನಗಳ ಸಭೆಯ ಕಾರ್ಯಸೂಚಿಯ ಪ್ರಕಾರ ವ್ಯಾಪಾರ, ಭದ್ರತೆ ಮತ್ತು ಪ್ರಾದೇಶಿಕ ಸ್ಥಿರತೆ ಸಂಬಂಧಿತ ವಿಷಯಗಳು ಚರ್ಚೆಗೆ ಬರಲಿವೆ. ಏಷ್ಯಾದ ಅತ್ಯಂತ ಕಿರಿಯ ರಾಷ್ಟ್ರವಾದ ಪೂರ್ವ ಟಿಮೋರ್ ಇಂದು ಆಸಿಯಾನ್‌ನ ೧೧ ನೇ ಸದಸ್ಯ ರಾಷ್ಟ್ರವಾಯಿತು.

***************

ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತ ಇಂದು ತೀವ್ರಗೊಂಡು ನಾಳೆ ಚಂಡಮಾರುತವಾಗಿ ಬದಲಾಗುವ ಸಾಧ್ಯತೆ ಇದೆ. ಭಾರತೀಯ ಹವಾಮಾನ ಇಲಾಖೆ ಪ್ರಕಾರ, ಮೊಂತಾ ಚಂಡಮಾರುತವು ಮಂಗಳವಾರ ಸಂಜೆ ಅಥವಾ ರಾತ್ರಿ ಆಂಧ್ರಪ್ರದೇಶದ ಕರಾವಳಿಯ ಕಾಕಿನಾಡ ಬಳಿ ತೀವ್ರ ಚಂಡಮಾರುತವಾಗಿ ಅಪ್ಪಳಿಸುವ ನಿರೀಕ್ಷೆಯಿದೆ. ಆಂಧ್ರಪ್ರದೇಶದಾದ್ಯಂತ ಕಟ್ಟೆಚ್ಚರ ವಹಿಸಲಾಗಿದ್ದು, ಆಸ್ತಿ ಮತ್ತು ಜೀವಹಾನಿ ತಡೆಯಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ. ಪರಿಹಾರ ಮತ್ತು ಪುನರ್‌ವಸತಿ ಕಾರ್ಯದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಿರಿಯ ಐಎಎಸ್ ಅಧಿಕಾರಿಗಳನ್ನು ವಿಶೇಷ ಅಧಿಕಾರಿಗಳಾಗಿ ಕರಾವಳಿ ಪ್ರದೇಶದಾದ್ಯಂತ ನಿಯೋಜಿಸಲಾಗಿದೆ. ಚಂಡಮಾರುತದ ಪ್ರಭಾವದಿಂದಾಗಿ ಮುಂದಿನ ಮೂರರಿಂದ ನಾಲ್ಕು ದಿನಗಳವರೆಗೆ ದೇಶದ ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ ಎಂದು ಇಲಾಖೆ ತಿಳಿಸಿದೆ.

***************

ಸೀಶೆಲ್ಸ್‌ನ ಚುನಾಯಿತ ಅಧ್ಯಕ್ಷ ಡಾ. ಪ್ಯಾಟ್ರಿಕ್ ಹರ್ಮೈನಿ ಅವರ ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸಲು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಇಂದು ಸೀಶೆಲ್ಸ್‌ಗೆ ಎರಡು ದಿನಗಳ ಪ್ರಯಾಣ ಬೆಳೆಸಿದ್ದಾರೆ. ಈ ಭೇಟಿಯ ಸಮಯದಲ್ಲಿ ಉಪರಾಷ್ಟ್ರಪತಿಗಳು, ಡಾ. ಹರ್ಮೈನಿ ಅವರಿಗೆ ಅಭಿನಂದನೆ ತಿಳಿಸುವ ಜೊತೆಗೆ ಎರಡೂ ದೇಶಗಳ ನಡುವಿನ ನಿಕಟ, ದೀರ್ಘಕಾಲೀನ ಸಂಬಂಧಗಳನ್ನು ಪುನರುಚ್ಚರಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

***************